# ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸ್ಪೆಷಲ್ ಕೇಸ್ ನಂಃ 205/2023

| | ಚಾಸಾಃ 5 | ಅಸಾಃ 5 |
|---|---|---|
| ಹೆಸರು | ಸುಬ್ಬೇಗೌಡ | |
| ತಂದೆಯ ಹೆಸರು : | ಮಾಸ್ತಿಗೌಡ | |
| ವಯಸ್ಸು: | 55 ವರ್ಷ | |
| ಕೆಲಸಃ | ವ್ಯವಸಾಯ | |
| ವಾಸಸ್ಥಳ | ಅಟ್ಟಾವರ ಗ್ರಾಮ | |

ದಿನಾಂಕಃ **08.10.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ಅವಿದ್ಯಾವಂತ. ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ಚಾಸಾ-2 ಮತ್ತು 4 ರವರು ಗೊತ್ತು. ನಿಪಿ-2ಕ್ಕೆ ಸುಮಾರು 5 ವರ್ಷಗಳ ಹಿಂದೆ ಊರಿನ ಸರ್ಕಲ್ ಹತ್ತಿರ ಇರುವಾಗ ಪೊಲೀಸರು ಸಾಕ್ಷಿಗೆ ಸಹಿ ಮಾಡಲು ಹೇಳಿದ್ದರಿಂದ ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಮಹಜರಿನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

ಪಾಟೀಸವಾಲುಃ ಎಸ್‌ಪಿಪಿ ರವರಿಂದಃ

ದಿ. 18.10.2019 ರಂದು ಬೆಳಿಗ್ಗೆ 8.30-9.00 ಗಂಟೆ ಸಮಯದಲ್ಲಿ ದುದ್ದ ಹೋಬಳಿ ಅಟ್ಟಾವರ ಗ್ರಾಮದ ಮುನಿಯಪ್ಪನ ದೇವಸ್ಥಾನದ ಹತ್ತಿರ ನನ್ನನ್ನು ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ವಿದ್ಯುತ್ ಅವಘಡವಾಗಿದ್ದ ಬಗ್ಗೆ ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ

ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ್ ವಿಚಾರ ತಿಳಿದು ನಿಪಿ-2ಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರ ವಿಚಾರ ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಕೆ ವಿ ವಕೀಲರಿಂದಃ

ಆರೋಪಿತರ ಪರ ವಕೀಲರು ಗೈರು ಹಾಜರು. ಯಾವುದೇ ಮನವಿ ಪ್ರಾರ್ಥನೆ ಇಲ್ಲ. ಆರೋಪಿತರು ಈ ಸಾಕ್ಷಿಗೆ ಪಾಟೀ ಸವಾಲು ಮಾಡಲು ತಯಾರಿರುವುದಿಲ್ಲ. ಆದ್ದರಿಂದ ಆರೋಪಿ ಪರ ಪಾಟೀ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ